# ಯುಪಿ ಚುನಾವಣೆ ಫಂಡ್‌ಗೆ ಮೇಲ್ಸೇತುವೆ ಯೋಜನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ಸರಕಾರ ಉಕ್ಕಿನ ಮೇಲ್ಸೇತುವೆಯನ್ನು ಉತ್ತರ ಪ್ರದೇಶ ಚುನಾವಣಾ ಫಂಡಿಂಗ್‌ಗಾಗಿ ಮಾತ್ರ ನಿರ್ಮಾಣ ಮಾಡುತ್ತಿಲ್ಲ, ಮುಂದೆ ಅಧಿಕಾರಕ್ಕೆ ಬರಲ್ಲ ಅನ್ನೋದು ಖಚಿತವಾಗಿದ್ದು, ಈಗಲೇ ಸಾಧ್ಯವಾದಷ್ಟು ದುಡ್ಡು ಬಾಚಿಕೊಂಡು ತಮ್ಮ ಜೇಬು ತುಂಬಿಸುವ ಹವಣಿಕೆಯಲ್ಲಿದೆ ಎಂದು ಇತಿಹಾಸಕಾರ ರಾಮಚಂದ್ರ ಗುಹಾ ಕಟುವಾಗಿ ಟೀಕಿಸಿದ್ದಾರೆ.

ಸಿಟಿಜನ್ ಫಾರ್ ಬೆಂಗಳೂರು ಭಾನುವಾರ ಲ್ಯಾವೆಲ್ಲೆ ರಸ್ತೆಯ ರೋಟರಿ ಹೌಸ್‌ನಲ್ಲಿ ಆಯೋಜಿಸಿದ್ದ ಉಕ್ಕಿನ ಮೇಲ್ಸೇತುವೆ ಕುರಿತಾದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ಕಾಂಗ್ರೆಸ್‌ಗೆ ದೇಶದಲ್ಲಿ ಪಕ್ಷ ಅಧಿಕಾರದಲ್ಲಿ ಇರುವ ಏಕೈಕ ದೊಡ್ಡ ರಾಜ್ಯ ಕರ್ನಾಟಕ. ಮುಂದಿನ ಚುನಾವಣೆಯಲ್ಲಿ ಕರ್ನಾಟಕದಲ್ಲೂ ಮರಳಿ ಅಧಿಕಾರಕ್ಕೆ ಬರುವ ನಂಬಿಕೆ ಕಾಂಗ್ರೆಸ್‌ಗೆ ಇಲ್ಲ. ಹೀಗಾಗಿ ಜನ ಹಿತ ಮರೆತು ತಮ್ಮ ಜೇಬು ತುಂಬಿಸಿಕೊಳ್ಳೊ ಕಾರ್ಯದಲ್ಲಿ ಸಚಿವರು ನಿರತರಾಗಿದ್ದಾರೆ ಎಂದು ಆರೋಪಿಸಿದರು.

ಇದೇ ವೇಳೆ ಮಾತನಾಡಿದ ಐಐಎಸ್‌ಸಿ ವಿಜ್ಞಾನಿ ಟಿ.ವಿ.ರಾಮಚಂದ್ರ, ಬೆಂಗಳೂರು ಗಾರ್ಡನ್ ಸಿಟಿಯಿಂದ ಡೆಡ್ ಸಿಟಿಯಾಗಿ ಪರಿವರ್ತನೆಯಾಗುತ್ತಿದೆ. ಈ ಮುಂಚೆ, ಮೇ ತಿಂಗಳಲ್ಲಿ ಗರಿಷ್ಠ 16 ಡಿಗ್ರಿ ಇರುತ್ತಿದ್ದ ತಾಪಮಾನ ಈಗ 34-37ಡಿಗ್ರಿ ವರೆಗೆ ಏರಿಕೆ ಕಂಡಿದೆ. ಗಾರ್ಡನ್ ಸಿಟಿ ಬೆಂಗಳೂರು 2020ಕ್ಕೆ ಶೇ.95 ರಷ್ಟು ಸಂಪೂರ್ಣ ಕಾಂಕ್ರೀಟ್ ನಗರಿಯಾಗಲಿದೆ. ಇದು ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿಯಲ್ಲ (ಬಿಡಿಎ) ಬದಲಾಗಿ ಬೆಂಗಳೂರು ಡಿಸ್ಟ್ರಕ್ಷನ್ ಏಜೆನ್ಸಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

## ಸ್ಟೀಲ್ ಬ್ರಿಡ್ಜ್ ಬಗ್ಗೆ 9 ಪ್ರಶ್ನೆ

ಪ್ರಕಾಶ್ ಬೆಳವಾಡಿ ನೇತೃತ್ವದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಸ್ಟೀಲ್ ಬ್ರಿಡ್ಜ್ ಬಗ್ಗೆ 9 ಪ್ರಶ್ನೆಗಳನ್ನು ಮುಂದಿಡಲಾಯಿತು.

- ಯೋಜನೆಯಿಂದ ಟ್ರಾಫಿಕ್ ಸಮಸ್ಯೆ ಬಗೆಹರಿಯುತ್ತಾ?
- ಟೈಮ್ ಲೈನ್ ಒಳಗೆ ಯೋಜನೆ ಪೂರ್ಣ ಸಾಧ್ಯವೇ?
- ಜಲಮಂಡಳಿ, ಬೆಸ್ಕಾಂ, ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮೋದನೆ ಸಿಕ್ಕಿದೆಯಾ?
- ಯೋಜನೆಗೆ ಬೇಕಾದ ಖಾಸಗಿ ಮಾಲೀಕತ್ವದ ಭೂಮಿಗೆ ಪರಿಹಾರ ನೀಡಿ ವಶಪಡಿಸಿಕೊಳ್ಳಲಾಗಿದೆಯಾ?
- ಸ್ಟೀಲ್ ಬ್ರಿಡ್ಜ್‌ಗೆ ಸಂಪೂರ್ಣ ಹಣ ಹೂಡುತ್ತಿರುವವರು ಯಾರು?
- ಟೋಲ್ ದರ ಎಷ್ಟು?
- ಟೋಲ್ ಫ್ರೀ ಆಗಿದ್ರೆ ವೆಚ್ಚದ ಹಣ ವಸೂಲು ಹೇಗೆ?
- ಆರ್‌ಟಿಐ ಅಡಿ ಸ್ಟೀಲ್ ಬ್ರಿಡ್ಜ್ ಮಾಹಿತಿ ನೀಡಲು ನಿರಾಕರಿಸಲಾಗುತ್ತಿರುವುದು ಏಕೆ?
- ಟ್ರಾಫಿಕ್ ಸಮಸ್ಯೆ ಬಗೆಹರಿಸಲು ಕಡಿಮೆ ವೆಚ್ಚದ ಪರ್ಯಾಯ ಯೋಜನೆಗಳ ಬಗ್ಗೆ ಏಕೆ ಚಿಂತನೆ ನಡೆಸುತ್ತಿಲ್ಲ?

## ಸಂವಾದದಲ್ಲಿ ರಾಜಕಾರಣಿಗಳ ಗೈರು!

ಸಂವಾದ ಕಾರ್ಯಕ್ರಮಕ್ಕೆ ರಾಜಕಾರಣಿ, ಸಚಿವರು ಹಾಗೂ ಅಧಿಕಾರಿಗಳನ್ನು ಆಹ್ವಾನಿಸಲಾಗಿತ್ತು. ಆದರೆ, ಎಎಪಿ ಪಕ್ಷದ ನಾಯಕರುಗಳನ್ನು ಬಿಟ್ಟು, ಇತರ ಪಕ್ಷದ ನಾಯಕರಾಗಲಿ, ಅಧಿಕಾರಿಗಳಾಗಲಿ ಪಾಲ್ಗೊಂಡಿಲ್ಲ. ಬೆಂಗಳೂರು ಜನರಿಗೆ ಯೋಜನೆ ಬಗ್ಗೆ ಇರುವ ಅನುಮಾನಗಳನ್ನು ಬಗೆಹರಿಸುತ್ತೇವೆ ಎಂದು ಸಚಿವ ಜಾರ್ಜ್ ಹೇಳಿದ್ದರು. ಆದರೆ, ಸಂವಾದದಲ್ಲಿ ಪಾಲ್ಗೊಂಡಿಲ್ಲ ಎಂದು ಆಯೋಜಕರು ಅಸಮಾಧಾನ ವ್ಯಕ್ತಪಡಿಸಿದರು.

## ಯೋಜನೆ ವಿರುದ್ಧ ವೋಟ್

ಕಳೆದ ಗುರುವಾರದಿಂದ ಬೆಂಗಳೂರಿನ ಹಲವೆಡೆ ಉಕ್ಕಿನ ಸೇತುವೆ ಬಗ್ಗೆ ಸಂಗ್ರಹಿಸಿದ ಜನಾಭಿಪ್ರಾಯವನ್ನು ಸಂವಾದದ ಕೊನೆಯಲ್ಲಿ ಎಣಿಕೆ ಮಾಡಲಾಯಿತು. ಅದರಲ್ಲಿ ಹೆಚ್ಚಿನ ಜನರು ಯೋಜನೆ ಬೇಡ ಎಂದು ಮತ ಹಾಕಿದ್ದರೆ ಎಂದು ಸಿಟಿಜನ್ ಫಾರ್ ಬೆಂಗಳೂರು ತಿಳಿಸಿದೆ. ಶೇ.72 ರಷ್ಟು ಜನರು ಸ್ಟೀಲ್ ಬ್ರಿಡ್ಜ್ ಬೇಕು ಎಂದಿದ್ದಾರೆ ಎಂದು ಸರಕಾರ ಹೇಳಿತ್ತು. ಆದರೆ, ಸಿಟಿಜನ್ ಫಾರ್ ಬೆಂಗಳೂರು ನಡೆಸಿದ್ದ ಜನಾಭಿಪ್ರಾಯ ಸಂಗ್ರಹದಲ್ಲಿ, 41,848 ಜನ ಬೇಡ ಎಂದು ವೋಟ್ ಹಾಕಿದ್ದಾರೆ. ಜನರಿಂದ ಸಂಗ್ರಹಿಸಿರುವ ಈ ಅಭಿಪ್ರಾಯ ಮತ್ತು ಸಂವಾದದಲ್ಲಿ ವ್ಯಕ್ತವಾದ ಅಭಿಪ್ರಾಯವನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನಿರ್ಧರಿಸಲಾಗಿದೆ.